ಮಾತ್ರ ಇದನ್ನು ನಾನು ಯಶಸ್ವಿಯಾಗಿ ಸಾಧಿಸುವುದಕ್ಕೆ ಸಾಧ್ಯ ಇದೆ ಜನಪ್ರತಿನಿಧಿಗಳಾದ ತಾವು ಕೊಡುವ ಸಲಹೆಗಳು ಕಾರ್ಯಕ್ರಮಗಳನ್ನು ಮನಸಿನಲ್ಲಿಟ್ಟುಕೊಂಡು ನಾನು ಕೆಲಸ ಮಾಡಲು ಸಿದ್ಧನಿದ್ದೇನೆಂದು ಭರವಸೆ ಕೊಡುತ್ತೇನೆ. ಆದರೆ ಇಂತಿಷ್ಟೇ ದಿನದಲ್ಲಿ ಮಾಡಿ ಎಂದು ಒತ್ತಾಯ ಮಾಡೋಕೆ ಹೋಗಬೇಡಿ ನನ್ನ ಕಾತುರತೆ ಆತುರತೆ ತಮಗೂ ಗೊತ್ತಿದೆ. ಆದಷ್ಟು ಬೇಗನೆ ಬಜೆಟ್ ಪಾಸಾದ ಈ ಸಮಿತಿಗಳನ್ನು ಮಾಡುತ್ತೇನೆಂದು ಭರವಸೆ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇಂತಹ ಉತ್ತರ ಕೊಡುವ ಸಚಿವರನ್ನು ಎಂದೂ ನಾವು ಕಂಡಿಲ್ಲ. ಎಷ್ಟು ನಯವಾಗಿ ಗಂಭೀರವಾಗಿ ತಾವು ಹೇಳುವುದರಲ್ಲೇ ನಮಗೆ ಹೊಟ್ಟೆ ತುಂಬಿಹೋಗಿಬಿಡುತ್ತದೆ. ಇವರಿಗೆ ಪದ್ಮಶ್ರೀ ಕೊಡಲು ಕೇಂದ್ರಕ್ಕೆ ಬೇಕಾದರೆ ಹೇಳಬಹುದು.

ಶ್ರೀ ಜಯಚಂದ್ರ : ಅಧ್ಯಕ್ಷರೇ ತಮ್ಮ ಅನಿಸಿಕೆಗೆ ಅನುಗುಣವಾಗಿ ಉತ್ತರ ಕೊಡುವುದಲ್ಲ ನಿರ್ದಿಷ್ಟವಾಗಿ ನಾವು ಸಮಿತಿಗಳನ್ನು ಕ್ಷೇತ್ರಗಳ ಮಟ್ಟದಲ್ಲಿ ಮಾಡುತ್ತೇವೆ ಎನ್ನುವ ಉತ್ತರ ತಮ್ಮಿಂದ ಬರಲಿಲ್ಲ

ಶ್ರೀ ಟಿ.ಎನ್. ನರಸಿಂಹಮೂರ್ತಿ : ನಾನು ಆಗಲೇ ಹೇಳಿದ್ದೇನೆ ಕ್ಷೇತ್ರಗಳ ಮಟ್ಟದಲ್ಲಿ ಮಾತ್ರವಲ್ಲ ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲೂ ಕೂಡ ನಾವು ಪ್ರತಿಪಕ್ಷಗಳ ನಾಯಕರನ್ನು ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಂತ್ರಮಂಡಲದ ಸಭೆಯಲ್ಲಿ ನಾನು ಅನೌಪಚಾರಿಕವಾಗಿ ಮಾತಾಡಬೇಕಾಗುತ್ತದೆ. ಮುಖ್ಯಮಂತ್ರಿಗಳ ಜೊತೆ ಇದರ ಸಮಾಲೋಚನೆ ಮಾಡಬೇಕಾಗುತ್ತದೆ. ಅಂತಿಮವಾಗ ಬಜೆಟ್ ಪಾಸಾದ ಮೇಲೆ ಕಾದು ನೋಡಿ ಎಷ್ಟು ಜಾಗ್ರತೆ ಮಾಡುತ್ತೇನೆ ಎಂದು ಈಗಲೇ ಹೇಳಲು ನನಗೆ ಸಾಧ್ಯವಿಲ್ಲ.

ಬಸವ ಕಲ್ಯಾಣದಲ್ಲಿ ಸಿವಿಲ್ ಕೋರ್ಟ್

375 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ) ಮಾನ್ಯ ಕಾನೂನು ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣದಲ್ಲಿ ಪ್ರಸ್ತುತ ವರ್ಷ ಸಿವಿಲ್ ಕೋರ್ಟ್ ಸ್ಥಾಪಿಸುವ ಯೋಜನೆ ಸರ್ಕಾರಕ್ಕಿದೆಯೇ

ಆ) ಇದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು.

ಇ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು) :

ಅ) ಹೌದು, ಇದರ ಬಗ್ಗೆ ಕರ್ನಾಟಕ ಉಚ್ಚನ್ಯಾಯಾಲಯದೊಡನೆ ಸಮಾಲೋಚಿಸಲಾಗುತ್ತಿದೆ.

ಆ) ಹೈಕೋರ್ಟಿನಿಂದ ಪ್ರಸ್ತಾವನೆಗಳು ಬಂದ ನಂತರ ದೊರೆಯುವ ರಾಜ್ಯದ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು ಆದ್ಯತೆಯ ಮೇರೆಗೆ ಕೋರ್ಟ್‌ಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ಮೇಲ್ಕಂಡ (ಅ) ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ : ಅಧ್ಯಕ್ಷರೇ ಬಸವ ಕಲ್ಯಾಣದಲ್ಲಿ ಸಿವಿಲ್ ಕೋರ್ಟ್ ಸ್ಥಾಪನೆ ಬಗ್ಗೆ ಸಚಿವರನ್ನು ಕೇಳಿದ್ದೆ ಅವರು ಉತ್ತರದಲ್ಲಿ ಏನು ಹೇಳಿದ್ದಾರೆಂದರೆ ಹೈಕೋರ್ಟಿನಿಂದ ಪ್ರಸ್ತಾವನೆ ಬಂದ ನಂತರ ದೊರೆಯುವ

ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು ಅಂದರೆ ರಾಜ್ಯದ ಸಂಪನ್ಮೂಲಗಳು ಯಾವುವು ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿಹೇಳಬೇಕು. ಮತ್ತು ಮೇಲಾಗಿ ನಾನು ಈ ಪ್ರಶ್ನೆಯನ್ನು ಕೇಳತಕ್ಕ ಮೂಲಭೂತ ಉದ್ದೇಶವೇನೆಂದರೆ ತಾವು ಸಿವಿಲ್ ಕೋರ್ಟುಗಳನ್ನು ಸ್ಥಾಪನೆ ಮಾಡಬೇಕು. ಇದು ಬಸವ ಕಲ್ಯಾಣಕ್ಕೆ ಅಷ್ಟೇ ಅಲ್ಲ, ಬಸವಕಲ್ಯಾಣ ಮತ್ತು ಭಾಲ್ಕಿ ತಾಲ್ಲೂಕಿನ ಜನರಿಗೆ ಇದರಿಂದ ಅನುಕೂಲವಾಗುತ್ತದೆ.

ಅಧ್ಯಕ್ಷರು : ಆರ್ಡರ್, ಆರ್ಡರ್.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು : ಆ ರೀತಿ ಮಾಡಿದಲ್ಲಿ ಅವರಿಗೆ ನ್ಯಾಯವನ್ನು ಕೊಡುವಲ್ಲಿ ಹೆಚ್ಚಿನ ಒಂದು ಸಹಾಯವನ್ನು ಮಾಡಿದಂತಾಗುತ್ತದೆ. ಜೊತೆಗೆ ನಮ್ಮ ಬಸವಕಲ್ಯಾಣವು ರೆವಿನ್ಯೂ ಸಬ್ ಡಿವಿಜನ್ ಆಗಿದ್ದು ಭೂ ಮಾಪನ ಉಪ ವಿಭಾಗ ಕೂಡ ಇರುತ್ತದೆ. ಹೀಗಾಗಿ ಬಸವಕಲ್ಯಾಣ ಹುಮ್ನಾಬಾದ್ ಭಾಲ್ಕಿ ಸಬ್ ಡಿವಿಜನ್‌ಗೆ ಬರುವುದರಿಂದ ಎಲ್ಲೆಲ್ಲಿ ನಮ್ಮ ರಾಜ್ಯದಲ್ಲಿ ಕಂದಾಯ ಉಪವಿಭಾಗ ಇದೆಯೋ ಸಬ್ ಡಿವಿಜನ್ ಎಲ್ಲಿದೆಯೋ ರೆವಿನ್ಯೂ ಸಬ್ ಡಿವಿಜನ್ ಎಲ್ಲಿದೆಯೋ ಅಲ್ಲೆಲ್ಲಾ ಒಂದು ಸಿವಿಲ್ ಕೋರ್ಟನ್ನು ಸ್ಥಾಪನೆ ಮಾಡಿದ್ದಾರೆ. ಆದರೆ ಬಸವಕಲ್ಯಾಣದಲ್ಲಿ ರೆವಿನ್ಯೂ ಸಬ್ ಡಿವಿಜನ್ ಇದ್ದರೂ ಕೂಡ ಇದುವರೆಗೂ ಅಲ್ಲಿ ಸಿವಿಲ್ ಕೋರ್ಟನ್ನು ಸ್ಥಾಪನೆ ಮಾಡಿಲ್ಲ. ಬಹಳ ದಿನಗಳಿಂದಲೂ ನಾವು ಕೇಳುತ್ತಿದ್ದೇವೆ. ಸರ್ಕಾರಕ್ಕೆ ಮನವಿ ಪತ್ರವನ್ನು ಕೂಡ ಕೊಟ್ಟಾಯಿತು. ಅದನ್ನು ಕೊಟ್ಟರೂ ಕೂಡ ಇದರ ಬಗ್ಗೆ ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಂಡಿಲ್ಲ. ನಮ್ಮದು ರೆವಿನ್ಯೂ ಸಬ್ ಡಿವಿಜನ್ ಪ್ಲೇಸ್ ಇದ್ದು ಮೇಲಾಗಿ ಭೂ ಮಾಪನ ವಿಭಾಗ ಅಂದರೆ ಸರ್ವೆ ಸೆಟ್ಲ್‌ಮೆಂಟ್ ಬಸವಕಲ್ಯಾಣದಲ್ಲಿ ಇದ್ದು ಭಾಲ್ಕಿ ಮತ್ತು ಹುಮ್ನಾಬಾದ್ ನಮ್ಮ ಬಸವಕಲ್ಯಾಣದ ಕಂದಾಯ ಉಪವಿಭಾಗಕ್ಕೆ ಬರುತ್ತದೆ. ಹೀಗಿರುವುದರಿಂದ ನಮ್ಮ ಬಸವಕಲ್ಯಾಣದ ಸಾಕಷ್ಟು ಜನರು ಬೀದರಿಗೆ ಹೋಗಬೇಕಾಗಿದೆ. ಮತ್ತು ಅಲ್ಲಿ ಬಹಳ ಕೇಸ್‌ಗಳು ಪೆಂಡಿಂಗ್ ಇವೆ ಬಹಳಷ್ಟು ಕೇಸುಗಳನ್ನು ಪೆಂಡಿಂಗ್ ಇಟ್ಟುಕೊಂಡಿರುವುದರಿಂದ ತೊಂದರೆಯಾಗಿ ಅಲ್ಲಿರುವ ಜನರಿಗೆ ತೀವ್ರವಾಗಿ ನ್ಯಾಯ ಸಿಗುತ್ತಿಲ್ಲ. ಚುರ್‌ಕಿನಾಳ ಮತ್ತು ಮುಖ್ನಾಮಾರಿ ಪ್ರಾಜೆಕ್ಟ್‌ಗಳು ಎಲ್ಲಾ ನಮ್ಮ ಭಾಗದಲ್ಲಿ ಬರುತ್ತಿರುವುದರಿಂದ ಸಿವಿಲ್ ಕೇಸ್‌ಗಳನ್ನು ಸಾಕಷ್ಟು ಅವರು ಡೀಲ್ ಮಾಡಬೇಕಾಗುತ್ತದೆ. ಹೀಗಾಗಿ ಹೆಚ್ಚಿನ ಒಂದು ಸಮಸ್ಯೆ ಬರುತ್ತಿದೆ. ಅತೀ ಶೀಘ್ರವಾಗಿ ನಮ್ಮ ಬಸವಕಲ್ಯಾಣದಲ್ಲಿ ಸಿವಿಲ್ ಕೋರ್ಟನ್ನು ಮಾಡಬೇಕು. ಈಗಾಗಲೇ 25 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಎರಡು ಸಿವಿಲ್ ಬಿಲ್ಡಿಂಗ್‌ಗಳನ್ನು ಕಟ್ಟಿದ್ದೇವೆ. ಮಂತ್ರಿಗಳು ಇದಕ್ಕೆ ನೇರವಾಗಿ ಉತ್ತರವನ್ನು ಕೊಡಬೇಕು. ಮತ್ತು ಸಂಪನ್ಮೂಲಗಳ ಬಗ್ಗೆ ಹೇಳಿದ್ದೀರಿ. ಸಂಪನ್ಮೂಲಗಳು ಎಂದರೆ ಏನು ಎಂದು ಅದರ ಬಗ್ಗೆ ಮಾಹಿತಿಯನ್ನು ತಾವು ಕೊಡಬೇಕು.

ಶ್ರೀ ಬ್ಲೇಸಿಯಸ್ ಎಂ ಡಿಸೋಜ : ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಸದಸ್ಯರು 21-1-92 ರಂದು ನಮಗೆ ಪತ್ರವನ್ನು ಬರೆದ ನಂತರ ನಾವು ಹೈಕೋರ್ಟಿಗೆ ಈ ವಿಷಯವನ್ನು ತಿಳಿಸಿದ್ದೇವೆ. ಹೈಕೋರ್ಟ್‌ನವರು ಅದನ್ನು ಪರಿಶೀಲನೆ ಮಾಡಲಿದ್ದಾರೆ. ಅವರ ಪ್ರಸ್ತಾವನೆ ನಮಗೆ ಬಂದ ನಂತರ ನಮ್ಮ ರಾಜ್ಯದ ಸಂಪನ್ಮೂಲವನ್ನು ನೋಡಿ ಬೇಗನೇ ನಾವು ಸಿವಿಲ್ ಕೋರ್ಟ್‌ನ್ನು ಸ್ಯಾಂಕ್ಷನ್ ಮಾಡುತ್ತೇವೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ : ಸಂಪನ್ಮೂಲಗಳೆಲ್ಲಾ ಇದೆ. ಕೋರ್ಟನ ಬಿಲ್ಡಿಂಗ್ ಇದೆ. ರೆವಿನ್ಯೂ ಸಬ್ ಡಿವಿಜನ್, ಭೂಮಾಪನ ಸಬ್ ಡಿವಿಜನ್‌ಗಳು ಇದೆ.

ಅಧ್ಯಕ್ಷರು : ಅದಕ್ಕೂ ಮೊದಲು ಹೈಕೋರ್ಟ್‌ನ ಪ್ರಸ್ತಾವನೆ ಬರಬೇಕು ಎಂದು ಹೇಳುತ್ತಾರೆ. ಅದು ಪ್ರೊಸೀಜರ್.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು : ಬರುತ್ತದೆ.

ಅಧ್ಯಕ್ಷರು : ಬರುತ್ತಿದೆಯೇ? ಬಂದಮೇಲೆ ಸಂಪನ್ಮೂಲ ಸಿಗುತ್ತದೆ. ಹೈಕೋರ್ಟ್‌ನಿಂದ ಪ್ರಸ್ತಾವನೆ ಬಂದ ಮೇಲೆ ತಾನೇ ಸಂಪನ್ಮೂಲದ ವಿಚಾರ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು : ಸಂಪನ್ಮೂಲ ಏನೂ ಇಲ್ಲಿ ಬೇಕಾಗಿಲ್ಲ, ಬೀದರ್‌ನಿಂದ ಶಿಫ್ಟ್ ಮಾಡಿದರೆ ಸಾಕು.

ಅಧ್ಯಕ್ಷರು : ಹಾಗಾದರೆ ನಿಮ್ಮ ಕೆಲಸ ಸುಲಭವಾಯಿತು.

ಖಾಸಗಿಯವರಿಗೆ ವಾಹನಗಳನ್ನು ಓಡಿಸಲು ಅನುಮತಿ.

413 : ಶ್ರೀ ಎಂ.ವಿ. ವೆಂಕಟಪ್ಪ, (ಮುಳಬಾಗಿಲು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜನತೆಯ ಅನುಕೂಲಕ್ಕಾಗಿ ಸಾರಿಗೆ ವಾಹನಗಳ ರಹದಾರಿಗಳನ್ನು ಖಾಸಗೀಯವರಿಗೆ ಕೊಡುವ ಯೋಜನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಆ ಯೋಜನೆಯ ರೂಪರೇಖೆಗಳೇನು?

ಇ) ಖಾಸಗೀಯವರು ಸಾರಿಗೆ ರಹದಾರಿಗಳನ್ನು ಕೊಟ್ಟರೆ ನಡೆಸುತ್ತೇವೆಂದು ಮುಂದೆ ಬಂದಿದ್ದಾರೆಯೇ?

ಈ) ಜನತೆಗೆ ಉತ್ತಮ ಸಾರಿಗೆ ವ್ಯವಸ್ಥೆ ಏರ್ಪಡಿಸಲು ಈಗಿರುವ ವಾಹನಗಳಿಗಿಂತ ಹೆಚ್ಚಾಗಿ ಎಷ್ಟು ವಾಹನಗಳು ಬೇಕಾಗಬಹುದು?

ಉ) ಅದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಪ್ರಶ್ನೆ ಅಪಕ್ವವಾಗಿದೆ.

ಆ) ಇದು ಇನ್ನೂ ಪ್ರಾರಂಭಿಕ ಹಂತದಲ್ಲಿದೆ.

ಇ) ಅನೇಕ ನಿರ್ವಾಹಕರು ಮುಂದೆ ಬಂದಿದ್ದಾರೆ.

ಈ) ಸುಮಾರು 2000 ಹೆಚ್ಚುವರಿ ಬಸ್ಸುಗಳು ಬೇಕಾಗಿದ್ದು ಅವುಗಳಲ್ಲಿ 558 ಬಸ್ಸುಗಳನ್ನು ಮಾರ್ಚ್ 1992ರಲ್ಲಿ ಮತ್ತು 800 ಬಸ್ಸುಗಳನ್ನು 92-93 ವರ್ಷದಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ. 2000 ಹೆಚ್ಚುವರಿ ಬಸ್ಸುಗಳಿಗೆ ಮತ್ತು ಡಿಪೋಗಳಿಗೆ ಸುಮಾರು 130 ಕೋಟಿ ರೂ.ಗಳಷ್ಟು.

ಶ್ರೀ ಎಂ.ವಿ. ವೆಂಕಟಪ್ಪ : ಸ್ವಾಮಿ ತಮ್ಮ ಉತ್ತರದಲ್ಲಿ ಸುಮಾರು ಎರಡು ಸಾವಿರ ಬಸ್‌ಗಳು ಹೆಚ್ಚಿಗೆ ಬೇಕು ಎಂದು ಹೇಳಿದ್ದೀರಿ. ಮಾರ್ಚಿ ತಿಂಗಳಲ್ಲಿ 558 ಬಸ್‌ಗಳ ಪ್ರಾರಂಭವಾಗುತ್ತಿವೆ. ಅಲ್ಲಿಗೆ ಇನ್ನು 1500 ಬಸ್‌ಗಳು ಬೇಕು. 1500 ಬಸ್‌ಗಳಿಗೆ 130 ಕೋಟಿ ರೂಪಾಯಿಗಳು ಬೇಕಾಗುತ್ತದೆ. 130 ಕೋಟಿ ರೂಪಾಯಿಗಳು ತಮ್ಮಲ್ಲಿ ರಿಸೋರ್‌ಸಸ್ ಇದೆಯೇ? ಇಲ್ಲದಿದ್ದರೆ ಒಂದು